ಬಂದಿದ್ದರೆ ಚೊಲೋ ಇತ್ತೇನೋ? ಇಂದಲ್ಲ, ನಾಳೆ ಬರ್ತಾಳೆ ಬಿಡು. ಹುಡುಗು ಮುಂಡೇದು, ಇನ್ನೂ ನೌಕರಿ ಮಾಡಬೇಕೆಂಬ ಆಸೆ ಇದೆಯೇನೋ? ನಿನ್ನ ಬಿಟ್ಟು ಅವಳಿಗೂ ಇರಲಿಕ್ಕಾಗಲ್ಲ. ಇರಲಿ, ಕಾದು ನೋಡೋಣ. ಆ ದೇವರು ನಿಂಜೊತೆಗೆ ಇದ್ದಾನೆ ಅಂತ ನಾನು ತಿಳ್ಕೊಂಡೀನಿ. ನಿನ್ನ ಕೃಷಿ ಕೆಲಸಕಾರ್ಯಗಳು ಸುಸೂತ್ರವಾಗಿ ನೆರವೇರಲಿ.' ಅನಿಕೇತನ ತಾಯಿ ಅಕ್ಕಮಹಾದೇವಿ ಮಗನನ್ನು ಬಿಗಿದಪ್ಪಿಕೊಂಡು ಹರಸಿದ್ದಳು.

ಅನಿಕೇತನ ತಂದೆ ಶಂಭುಲಿಂಗಪ್ಪನವರಿಗೆ ಒಂದು ರೀತಿ ಸಂತೋಷವಾಗಿದ್ದರೆ ಒಂದು ರೀತಿಯ ಆತಂಕ ಶುರುವಾಗಿತ್ತು. 'ಮಗೂ, ನೀನು ಇಲ್ಲಿಗೆ ಬಂದು ಕೃಷಿಯಲ್ಲಿ ತೊಡಗಿಸಿಕೊಳ್ಳುವುದು ಒಂದು ರೀತಿ ಸಂತೋಷ ಎನಿಸುತ್ತಿದೆ. ಆದರೆ ಕೃಷಿ ನೀನು ತಿಳಿದುಕೊಂಡಷ್ಟು ಸರಳ ಇಲ್ಲ. ನಿನ್ನ ಲೆಕ್ಕಾಚಾರದಂತೆ ಇಲ್ಲಿ ನಿಶ್ಚಿತ ಆದಾಯವಿಲ್ಲ. ಕೃಷಿಯಲ್ಲಿನ ತೊಂದರೆತಾಪತ್ರಯ, ಕಷ್ಟಕಾರ್ಪಣ್ಯ, ಲಾಭ ನಷ್ಟಗಳನ್ನು ಗಮನಿಸಿದರೆ ಈಗಿನ ಕಾಲದಲ್ಲಿ ನೌಕರಿಯೇ ಉತ್ತಮ ಎಂದೆನಿಸುತ್ತಿದೆ. ದೂರದ ಬೆಟ್ಟ ನುಣ್ಣಗೆ ಅಷ್ಟೇ. ಸರಿಯಾಗಿ ಮಳೆ ಬೆಳೆಯಾದರೆ ಹೊಟ್ಟೆಬಟ್ಟೆಗೇನೂ ಧೋಕಾ ಇಲ್ಲ. ಭೂತಾಯಿಗೆ ನೀರುಣ್ಣಿಸಿ, ತಂಪೆರೆದು ಸಸ್ಯ ಸಂಕುಲಗಳನ್ನು ಪೋಷಿಸಿ ಸಮೃದ್ಧಿ ಬೆಳೆಗಳಿಗೆ ಕಾರಣೀಭೂತಳಾಗುವ ಗಂಗಾಮಾತೆಯ ಆಶೀರ್ವಾದ ಲಭಿಸಿದರೆ ಬಂಗಾರದಂಥ ಬೆಳೆ ಬೆಳೆಯಬಹುದು. ಇತ್ತೀಚೆಗೆ ಒಂದಿಷ್ಟು ಜನ ರೈತರು ಹಣ್ಣು, ತರಕಾರಿ, ಹೂವು ಮತ್ತು ಇತರೆ ತೋಟಗಾರಿಕೆ ಬೆಳೆಗಳನ್ನು ಬೆಳೆದು ಸಾಕಷ್ಟು ದುಡ್ಡು ಮಾಡುತ್ತಿದ್ದಾರೆ. ನಿನಗೆ ಆ ಗಂಗಾಮಾತೆ, ಪ್ರಕೃತಿಮಾತೆ ಒಲಿಯಲಿ, ನೆಲವೆಲ್ಲ ಹಸಿರಾಗಿರಲಿ; ಬೆವರಿಳಿಸಿ ದುಡಿಯಲು ಮುಂದಾಗಿರುವ ನಿನ್ನ ಜೇಬು ತುಂಬಲಿ ಎಂದು ಆಶೀರ್ವದಿಸುವೆ. 'ಒಕ್ಕಲಿಗನೊಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ' ಎಂಬ ದಾರ್ಶನಿಕರ ಮಾತುಗಳನ್ನು ದೇಶದ ಚುಕ್ಕಾಣಿ ಹಿಡಿದಿರುವ ನಾಯಕರು ಮರೆತಂತಿದೆ. ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡದೇ ಬೇರೆ ವಿಷಯಗಳಿಗೆ ಮಣೆ ಹಾಕುತ್ತಿರುವ ಸರಕಾರದ ಧೋರಣೆಗಳಿಂದಲೂ ಕೃಷಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಿಲ್ಲ. ಈ ತಾರತಮ್ಯದ ಫಲ ಮುಂದಿನ ದಿನಗಳಲ್ಲಿ ನಿಚ್ಚಳವಾಗೇ ಕಾಣಬಹುದು. ಅದೇನೇ ಇರಲಿ, ನಿನ್ನ ಕೆಲಸದಲ್ಲಿ ಶ್ರದ್ಧೆ, ಪ್ರಾಮಾಣಿಕ ಪ್ರಯತ್ನ, ಪರಿಶ್ರಮ ಇರಲಿ. ಪ್ರಯತ್ನಕ್ಕೆ ಫಲ ಇದ್ದೇ ಇರುತ್ತೆ..' ಶಂಭುಲಿಂಗಪ್ಪನವರ ಆಶೀರ್ವಚನ ಲಭಿಸಿತ್ತು ಅನಿಕೇತನಿಗೆ.

ಅನಿಕೇತನಿಗೆ ಇರೋದು ಒಬ್ಬ ಅಣ್ಣ ದರ್ಶನ್ ಮತ್ತು ಒಬ್ಬ ತಂಗಿ ಆಕೃತಿ ಅಂತ. ಆಕೃತಿಯೂ ಸಾಫ್ಟ್‌ವೇರ್ ಇಂಜಿನಿಯರ್, ಮದುವೆಯೂ ಆಗಿದ್ದು ತನ್ನ ಸಾಫ್ಟ್‌ವೇರ್ ಗಂಡನೊಂದಿಗೆ ಬೆಂಗಳೂರಲ್ಲೇ ಇದ್ದಾಳೆ. ಅಣ್ಣ ದರ್ಶನ್ ಪ್ರೌಢಶಾಲೆಯಲ್ಲಿ ಶಿಕ್ಷಕ. ಈಗ್ಗೆ ಐದು ವರ್ಷಗಳ ಹಿಂದೆ ಕುಟುಂಬದ ಆಸ್ತಿಯಲ್ಲಿ ಭಾಗ ತೆಗೆದುಕೊಂಡು ತನ್ನ ಹೆಂಡತಿಯೊಂದಿಗೆ ಬೇರೆ ಸಂಸಾರ ಹೂಡಿದ್ದಾನೆ. ಕುಟುಂಬದ ಜಮೀನೆಲ್ಲವನ್ನೂ ನೀನೇ ಮಾಡಿಕೊಂಡಿರು ಎಂದು ಮನೆಯವರೆಲ್ಲರು ಹೇಳಿದರೂ ಕೇಳದೇ ತನ್ನ ಪಾಲಿನ ಇಪ್ಪತ್ತು ಎಕರೆ ಜಮೀನನ್ನು ತೆಗೆದುಕೊಂಡು ಬೇರೆಯಾಗಿದ್ದಾನೆ. ತಂದೆತಾಯಿಗಳನ್ನೂ ತನ್ನೊಂದಿಗೆ ಇರಲು ಕರೆದುಕೊಂಡು ಹೋಗಲಿಲ್ಲ. ಅವನಿಗೂ ಅವನ ಹೆಂಡತಿಗೂ ಇವರಿಂದ ದೂರವಿರಬೇಕೆಂಬ ಹಂಬಲ. ಕುಟುಂಬದ ಜವಾಬ್ದಾರಿ ಎಲ್ಲವೂ ಅನಿಕೇತನ ಹೆಗಲಿಗೇರಿತ್ತು. ತಂದೆತಾಯಿಗಳನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಅನಿಕೇತ್ ಮತ್ತು ಸಮೃದ್ಧಿ ಎಷ್ಟೇ ಪ್ರಯತ್ನ ಪಟ್ಟರೂ ಅವರು ಊರು ಬಿಡಲು ಮನಸ್ಸು ಮಾಡಲಿಲ್ಲ. ಆಗೊಮ್ಮೆ, ಈಗೊಮ್ಮೆ ಅಂತ ನಾಲ್ಕು ದಿನಗಳವರೆಗೆ ಬೆಂಗಳೂರಿಗೆ ಹೋಗಿ ಅನಿಕೇತ್ ಮತ್ತು ಆಕೃತಿಯ ಮನೆಯಲ್ಲಿ ಇದ್ದು ಬರುತ್ತಿದ್ದರು ಅಷ್ಟೇ.

ಅನಿಕೇತ್, ನೀನು ಸುಮ್ಮನೇ ವಾಪಾಸು ಹೋಗಿ ನಿನ್ನ ನೌಕರಿ ಮುಂದುವರಿಸು ಎಂದು ಬಹಳಷ್ಟು ಜನ ಹಿತೈಷಿಗಳು, ಒಳಗೊಳಗೇ ದ್ವೇಷಿಸುವ, ಹೊರಗಡೆ ಆತ್ಮೀಯರೆಂಬಂತೆ ಮುಖವಾಡ ಹೊತ್ತವರು ಹೇಳಿದರೂ ಅವನೇನು ಜಪ್ಪಯ್ಯ ಅನ್ನಲಿಲ್ಲ. ಅನಿಕೇತ್ ದೃಢ ಮನಸ್ಸು ಮಾಡಿದ್ದ. ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. 'ನಮಗೇನಾಗಬೇಕಿದೆ? ಏನೋ, ಅವನ ಒಳ್ಳೇದಕ್ಕೆ ಹೇಳಿದೆವು. ನಮ್ಮ ಮಾತುಗಳೇ ಅವನಿಗೆ ಹಿಡಿಸುತ್ತಿಲ್ಲ. ಸತ್ಯ ಕಹಿಯಲ್ಲವೇ? ಅವನ ಕರ್ಮ, ಅವನು ಅನುಭವಿಸುತ್ತಾನೆ' ಎಂದು ಅಂದುಕೊಂಡು ಸುಮ್ಮನಾಗಿದ್ದರು.

ಅನಿಕೇತ್ ತಜ್ಞರ ಮತ್ತು ಹಿರಿಯರ ಸಲಹೆ ಪಡೆದು ಕೃಷಿ ಯೋಜನೆಯಲ್ಲಿ ಮುಂದಡಿ ಇಡಲು ನಿರ್ಧರಿಸಿಕೊಂಡ. ಕೃಷಿ ವಿಶ್ವವಿದ್ಯಾಲಯದ ತಜ್ಞರನ್ನು, ಕೃಷಿ ಇಲಾಖೆಯ ಅಧಿಕಾರಿಗಳನ್ನು ಭೆಟ್ಟಿಯಾಗಿ ತನ್ನ ಯೋಜನೆಗಳ ಬಗ್ಗೆ ವಿವರಿಸಿದ, ಚರ್ಚಿಸಿದ. ಪ್ರಗತಿಪರ ರೈತರನ್ನು ಸಂಪರ್ಕಿಸಿದ. ಅವರ ಅನುಭವಗಳನ್ನು ಆಲಿಸಿ ಜ್ಞಾನ ಗಳಿಸಿಕೊಂಡ. ತನ್ನ ಜಮೀನಿಗೆ ಕರೆದುಕೊಂಡು ಹೋದ. ಮಣ್ಣಿನ ಗುಣಕ್ಕೆ ಹೊಂದಿಕೊಳ್ಳುವ ಬೆಳೆಗಳು, ಪರ್ಯಾಯ ಬೆಳೆಗಳ ಬಗ್ಗೆ ಚರ್ಚಿಸಿ ಉತ್ಕೃಷ್ಟ ಮಾಹಿತಿಗಳನ್ನು ಸಂಗ್ರಹಿಸಿದ. ಟಿಪ್ಪಣಿಗಳನ್ನು ಮಾಡಿಕೊಂಡ. ಕೃಷಿಗೆ ಸಂಬಂಧಿಸಿದ ಹಲವು ಪುಸ್ತಕಗಳನ್ನು ಓದಿ ಮನನ ಮಾಡಿದ.

****

ಒಂದೇ ಹಾಸುಗೆಯಲ್ಲಿದ್ದ ತನ್ನ ಭಾಗದ ಇಪ್ಪತ್ತು ಎಕರೆ ಜಮೀನನ್ನು ಮೊದಲು ಸಮತಟ್ಟು ಮಾಡಲು ಅನಿಕೇತ್ ಮುಂದಾಗಿದ್ದ. ಜೆಸಿಬಿಗಳು, ಟ್ರ್ಯಾಕ್ಟರ್‌ಗಳು ತುಸು ದಿನಗಳವರೆಗೆ ಹರಿದಾಡಿದವು. ಕೃಷಿ ಕೂಲಿ ಕಾರ್ಮಿಕರ ದಂಡೇ ಇತ್ತು. ಭೂಮಿ ಸಮತಟ್ಟಾಗುತ್ತಿದ್ದಂತೆ ಭೂಗರ್ಭದಲ್ಲಿ ಅಡಗಿರುವ ಗಂಗಾಮಾತೆಯ ಹುಡುಕಾಟಕ್ಕೆ ಮುಂದಾಗಿದ್ದ. ತಜ್ಞ ಭೂಗರ್ಭ ಶಾಸ್ತ್ರಜ್ಞರ ಸಲಹೆ ಪಡೆದ. ಗಂಗಾಮಾತೆ ಅಡಗಿ ಕುಳಿತಿರುವ ತಾಣಗಳ ಶೋಧನೆ ನಡೆದು ಕೆಲವು ಸ್ಥಳಗಳನ್ನು ಗುರುತಿಸಲಾಯಿತು. ಭೂಗರ್ಭ ಶಾಸ್ತ್ರಜ್ಞರ ಸಲಹೆಯಂತೆ ಕೊಳವೆ ಬಾವಿಗಳನ್ನು ಕೊರೆಸಲು ಮುಂದಾದ. ಮೂರು ಸ್ಥಳಗಳಲ್ಲಿ ಬಾವಿ ಕೊರೆಸಿದ. ಒಂದರಲ್ಲೂ ಒಂದು ಹನಿ ನೀರು ಬರಲಿಲ್ಲ. ಭೂಗರ್ಭ ಶಾಸ್ತ್ರವೇ ಸೈನ್ಸ್ ಆಫ್ ಪ್ರೊಬ್ಯಾಬಿಲಿಟಿ ಅಂತ ಅನಿಕೇತ್ ಎಲ್ಲೋ ಓದಿದ್ದನ್ನು ಜ್ಞಾಪಿಸಿಕೊಂಡು ಸುಮ್ಮನಾದ. ಸಕ್ಸೆಸ್ ರೇಟ್ ಐವತ್ತರ ಪ್ರತಿಶತ ಅಂತ ಭೂಗರ್ಭ ಶಾಸ್ತ್ರಜ್ಞರೇ ಹೇಳಿದ್ದರು.

ಕೌತುಕದಿಂದ ಕಾಯುತ್ತ ಕುಳಿತಿದ್ದ ಜನರ ನಾಲಿಗೆಗಳು ಮತ್ತೆ ಚುರುಕಾದವು. ಮನಸ್ಸಿಗೆ ಬಂದಂತೆ ಮಾತಾಡಿ ತಮ್ಮ ಹರಕು ಬಾಯಿಗಳ ಚಪಲ ತೀರಿಸಿಕೊಂಡರು.

ನಮಗಿದು ಮೊದಲೇ ಗೊತ್ತಿತ್ತು, ಅಲ್ಲಿ ನೀರು ಬೀಳುವುದಿಲ್ಲವೆಂದು. ಉಳಿಸಿಕೊಂಡಿರುವ ದುಡ್ಡನ್ನು ಸುಮ್ಮಸುಮ್ಮನೇ ಭೂಮಿಗೆ ಚೆಲ್ಲುತ್ತಿದ್ದಾನೆ ಹುಚ್ಚು ಹುಡುಗ. ಹಿಂಗೇ ಕೈಯಲ್ಲಿರುವ ದುಡ್ಡನ್ನು ಖರ್ಚು ಮಾಡಿಕೊಂಡು ಪ್ಯಾ ಪ್ಯಾ ಅಂತ ವಾಪಾಸು ಹೋಗ್ತಾನೆ ಒಂದು ದಿನ. ಶಂಭುಲಿಂಗಪ್ಪ ತನ್ನ ಮಗನಿಗೆ ಕಿವಿಮಾತಾದರೂ ಹೇಳಬಾರದಿತ್ತೇ? ಹೀಗೆ ಮಾತುಗಳು ಹರಿದಾಡತೊಡಗಿದ್ದವು ಜನರ ಎಲುವಿಲ್ಲದ ನಾಲಿಗೆಗಳಿಂದ. ಅನಿಕೇತ್ ಮಾತ್ರ ಯಾವುದಕ್ಕೂ ಅಧೀರನಾಗಲಿಲ್ಲ. ತನ್ನ ದೃಢ ನಿರ್ಧಾರದಿಂದ ಹಿಂದೆ ಸರಿಯುವ ಸೂಚನೆಯನ್ನೂ ಕೊಡಲಿಲ್ಲ. ಮುಗುಳ್ನಗೆಯೇ ಅವನ ಉತ್ತರವಾಗಿತ್ತು.

ಮತ್ತೆ ಅದ್ಯಾರೋ ತೆಂಗಿನಕಾಯಿಯನ್ನು, ಕವಲುಗಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಅಂತರ್ಜಲ ಪತ್ತೆ ಹಚ್ಚುವವರ ಬಗ್ಗೆ ತಿಳಿಸಿದರು. ಅಂಥ ತಜ್ಞರನ್ನು ಕೆಲವರು ತಾವಾಗಿಯೇ ಇವನ ಜಮೀನಿಗೆ ಕರೆದುಕೊಂಡು ಬಂದು ಕೆಲವು ಸ್ಥಳಗಳನ್ನು ಗುರುತಿಸಿದರು. ಈ ತಜ್ಞರು ತಾವು ತೋರಿಸಿರುವ ಪಾಯಿಂಟ್‌ಗಳಲ್ಲಿ ನೂರಕ್ಕೆ ನೂರರಷ್ಟು ನೀರು ಸಿಗುತ್ತದೆ ಎಂದು ಘಂಟಾಘೋಷವಾಗಿ ನುಡಿದಿದ್ದರು. ಅನಿಕೇತನಿಗೇಕೋ ಅಂಥ ನಂಬಿಕೆ ಚಿಗುರಿರಲಿಲ್ಲ. ಆದರೂ ಜನರ ಒತ್ತಾಸೆಗೆ ಕಟ್ಟುಬಿದ್ದು ನಾಲ್ಕು ಪಾಯಿಂಟ್‌ಗಳಿಗೆ ಬೋರ್ ಗಾಡಿ ಹಚ್ಚಿಸಿದ. ನಾಲ್ಕು ಪಾಯಿಂಟ್‌ಗಳಲ್ಲೂ ಒಂದು ಹನಿ ನೀರು ಜಿನುಗಲಿಲ್ಲ. ಪಾಯಿಂಟ್‌ಗಳನ್ನು ತೋರಿಸಲು ಒತ್ತಾಯಿಸಿದವರು ಬಾಯಿಗೆ ಬೀಗ ಹಾಕಿಕೊಂಡು ತೆಪ್ಪಗಾದರು. ಮತ್ತೆ ಕೆಲವೊಬ್ಬರು ಆ ಸ್ವಾಮೀಜಿ ಪಾಯಿಂಟ್ ತೋರಿಸುತ್ತಾರೆ; ಈ ಮನುಷ್ಯ ಪಾಯಿಂಟ್ ತೋರಿಸುತ್ತಾನೆ; ಅವರು ಈ ಮೊದಲು ತೋರಿಸಿದ ಪಾಯಿಂಟ್‌ಗಳು ನೂರಕ್ಕೆ ನೂರರಷ್ಟು ಸಕ್ಸೆಸ್ ಆಗಿವೆ; ಹಾಗೇ, ಹೀಗೇ ಅಂತ ಉಚಿತ ಸಲಹೆ ನೀಡಿದಾಗ ಅನಿಕೇತ್ ಅವರು ಯಾರ ಮಾತುಗಳನ್ನೂ ಕಿವಿಗೆ ಹಾಕಿಕೊಳ್ಳಲಿಲ್ಲ. ಅನಿಕೇತ್ ಸ್ಥಿತಪ್ರಜ್ಞನಂತೆ ಇದ್ದ.

ಅಂದು ಬೋರ್ ಗಾಡಿಯವ, 'ಸರ್, ನೀವೇ ಒಂದು ಪಾಯಿಂಟ್ ತೋರಿಸಿ. ಅಲ್ಲೇ ನಿಮ್ಮ ಅದೃಷ್ಟವನ್ನು ಪರೀಕ್ಷಿಸೋಣ' ಎಂದಿದ್ದ. ಯಾವುದೋ ಯೋಚನೆಯಲ್ಲಿದ್ದ ಅನಿಕೇತ್ ತನ್ನದೂ ಒಂದು ಪಾಯಿಂಟ್ ತೋರಿಸಿದ. ಮತ್ತೆ ಭೂಮಿಯನ್ನು ಕೊರೆಯುವ ಕೆಲಸ ಶುರುವಾಗಿತ್ತು. ಅನಿಕೇತ್ ಉತ್ಸುಕತೆಯಿಂದ ಮೌನಿಯಾಗಿ ಕುಳಿತಿದ್ದ. ಬೋರ್ ಗಾಡಿಯ ಭರ್ರೆನ್ನುವ ಶಬ್ದವಷ್ಟೇ ಕಿವಿ ತೂತಾಗುವಂತೆ ಕೇಳಿಸುತ್ತಿತ್ತು. ಉಳಿದಂತೆ ಎಲ್ಲೆಡೆ ನೀರವ ಮೌನ ತಾಂಡವವಾಡುತ್ತಿತ್ತು. ಭೂಕೊರೆತ ಎಪ್ಪತ್ತು ಅಡಿ ದಾಟಿ